ದಿನಾಂಕ : 06-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ಕುಸನಾಳದಿಂದ ಇಂಗಳಿ ಗ್ರಾಮ 8-9 ಕಿಲೋಮೀಟರ ದೂರದಲ್ಲಿದೆ. ಚಾಸಾಃ 3 ಸದಾಶಿವ ಕಾಂಬಳೆ ನನ್ನ ಸಂಬಂಧಿಕರು. ಚಾಸಾಃ 7 ಫ್ರಾಸಾಃ 3 ಸುರೇಶ ಢಾಕನಾಯಕ ಅವರೂ ಸಹ ನನ್ನ ಸಂಬಂಧಿಕರು ಎನ್ನುವುದು ಸರಿ. ಕಾಗವಾಡ ಪೋಲಿಸರು ನನ್ನನ್ನು ಪಂಚನಾಮೆಗೆ ಸಾಕ್ಷಿಯಾಗಿ ಕರೆಯಲು ಬಂದಿದ್ದರು. ನನಗೆ ದಿನಾಂಕ ನೆನಪಿರುವುದಿಲ್ಲ, ಆದರೆ 2018 ರಲ್ಲಿ ಮಧ್ಯಾಹ್ನ 12:00-12:30 ರ ಸಮಯದಲ್ಲಿ ಕರೆದಿದ್ದರು.

2. ಪಂಚನಾಮೆ ಮಾಡಿದ ಸ್ಥಳದ ಸರ್ವೇ ನಂಬರ ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ ಆದರೆ ಅದನ್ನು ಬರವಣಿಗೆಯಲ್ಲಿ ಬರೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಆ ಜಾಗದಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿರುವುದಿಲ್ಲ. ನಾನು ಸ್ಥಳದಲ್ಲಿ ಖಾಲಿ ಕಾಗದದ ಮೇಲೆ ಸಹಿ ಮಾಡಿದ್ದೇನೆ. ಸ್ಥಳವನ್ನು ವಿನೋದ ಪಾಟ್ನಕರ ಎನ್ನುವವರು ತೋರಿಸಿದರು. ಅವರು ಕುಸನಾಳ ಗ್ರಾಮದವರು, ಅವರು ನನಗೆ ಪರಿಚಯಸ್ಥರು. ವಿನೋದ ಪಾಟ್ನಕರ ಅವರು ನನಗೆ ಪೋನ ಮಾಡಿ ಪಂಚನಾಮೆ ಮಾಡಿದ ಸ್ಥಳಕ್ಕೆ ಬರುವಂತೆ ಕರೆದಿದ್ದರು.

3. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿ ಪೋಟೋ ತೆಗೆದರು ಎಂದು ಸಂಗಪ್ಪ ಮತ್ತು ಸುರೇಶ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆ ಮಾಡಿಲ್ಲ, ಪೋಟೋ ತೆಗೆದಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.